ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 44.

ಬೆಂಗಳೂರು, ಗುರುವಾರ, ನವಂಬರ್ ತಾ॥ 12, ಸ್ 1903.

IIನೆ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂಬರು 417, ತಾರೀಖು 27ನೆ ಅಕ್ಟೋಬರ್ 1903.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೇರಿ ತಾಲ್ಲೂಕಿನ 255 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಜಮಾಬಂದಿಯಾನೆ ತಿದ್ದುಪಡಿಯಾದ ಸರ್ವೆ ಆಕಾರವು ಗವರ್ನ್‌ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಮೇರಿಗೆ ಅದನ್ನು ಬಹಿರಂಗವಾಗಿ ಪ್ರಾಯಿಷ್ಮಾಡಲ್ಪಡುವ ಕೆಲಸವೂ ಸ್ 1903ನೆ ಇಸವಿ ನವಂಬರು 25ನ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ದಾವಣಗೇರೆಯಲ್ಲಿ ಪ್ರಾರಂಭಿಸಲ್ಪಡುವದು.

ನಂ. 440—ತಾರೀಖು 3ನೆ ನವಂಬರ್ 1903ನೆ ಇಸವಿ.

ಚಿತ್ರದುರ್ಗ ಡಿಸ್ಟ್ರಿಕ್ಟ್‌ಗೆ ಸೇರಿದ ಹಾಲ ಹಿರಿಯೂರು ತಾಲ್ಲೂಕಿನಲ್ಲಿರುವ 149 ಮತ್ತು ಹೊಸದಾಗಿ ಏರ್ಪಾಟಾದ ಹೊಸದುರ್ಗ ತಾಲ್ಲೂಕಿನ ಬಾಬತು 55 ಜುಮ್ಲಾ 204 ಸರಕಾರಿ ಗ್ರಾಮಗಳಲ್ಲಿ ರಿವಿಜ್ಡ್‌ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನ್‌ಮೆಂಟಿನವರು ಮಂಜೂರ ಮಾಡಿರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಅದನ್ನು ಪ್ರಾಯಿಷ್ಮಾಡತಕ್ಕ ರಿವಿಜ್ಡ್ ಸೆಟ್ಲ್‌ಮೆಂಟ್ ಕೆಲಸವು ಹಿರಿಯೂರ ಮೊಕ್ತಾವಿನಲ್ಲಿ 1903ನೆ ಇಸವಿ ಡಿಸೆಂಬರು ತಾರೀಖು 8ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದೆಂದು ಸಕಲ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಈ ಮೂಲಕ ಪ್ರಸಿದ್ಧಪಡಿಸಿ ಇದೆ.

ಜೆ. ಪಿ. ಗ್ಯಾಂಟ್,
ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರ್, ಮೈಸೂರ್.

ಫಾರೆಸ್ಟ್ ಇಲಾಖಾ.

ನೋಟಿಸ್.

1903ನೆ ಇಸವಿ ಆಗಷ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜೆನಿಕಿ ಜಮಾವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಪ್ರಾಯಿಷಾಗಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜೆನಿಕಿ ಜಮಾವಣಿ ಹಕ್ಕನ್ನು 1903ನೆ ಇಸವಿ ನವಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್‌ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ತಾರೀಖು 7ನೆ ನವಂಬರ್ 1903ನೆ ಇಸವಿ.

1900ನೆ ಇಸವಿ ಫಾರೆಸ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್‌ಮೇರೆ ಈ ಕೆಳಗೆ ನಮೂದಿಸಿರುವ ತೊಲೆಗಳು ಕಪಿಲಾನದಿ ನೀರಿನ ಕಳೆಯಿಂದ ಹೊಡದುಕೊಂಡುಬಂದು ಹಾಲಿ ಸರಗೂರು ಸೋವೇಶ್ವರ ದಳಕಡು ಡಿಪೋದಲ್ಲಿ ಇರುವದು. ಇದರ ಹಕ್ಕುದಾರ್ರು ಯಾರಾದರು ಇದ್ದಲ್ಲಿ ಸದರಿ ತೊಲೆಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯಿತು ಒಂದು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ತೊಲೆಗಳ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರ್ಕಾರಕ್ಕೆ ವಳಪಡಿಸಿಕೊಳ್ಳುವರು.

2. ಸದರಿ ತೊಲೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೇದಾರಿ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಲಾಗಸಡನ್ನು ಫಾರೆಸ್ಟ್ ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ:—

ನಂಬರ್.	ತೊಲೆ ವಿವರ.	ಗುರುತು.	ಲಾಂಬಿ.	ಸುತ್ತು.	ಸಲೆ ಅಡಿ.
			ಅಡಿ. ಅಂ.	ಅಡಿ. ಅಂ.	ಅಡಿ.
1	ಸಾಗುವಾನಿ ಗುಂಡು ತೊಲೆ ..	ನಂಬರು ಮತ್ತು ಇತರ ವಿಧವಾದ ಗುರುತು ಸಹಾ ಕಾಣುವದಿಲ್ಲಾ.	10— 9	3— 1	6
2	ಡಿಟೋ ಚೆದರ ಪೋಕಲ್ ತೊಲೆ		12— 6	4—11	19

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 30ನೆ ಅಕ್ಟೋಬರು 1903.

1. ಕಂದಾಯದ ಬಾಕೀದಾರರಾದ ಜೋಡಿ ಚಾವುರಹಳ್ಳಿ ಗ್ರಾಮದ ವೆಂಕಟೇಶಯ್ಯ ವಗೈರೇರಿಂದ ಬರಬೇಕಾದ [redacted] ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಚೇರಿಯಲ್ಲಿ [redacted]ನೆ ಇಸವಿ ಡಿಸೆಂಬರು ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 155—12—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.